# ಕಣ್ಣೀರಿನ ಮೊಸಳೆಯಲ್ಲ, ಕಣ್ಮಣಿಯಾದವಳು!

■ ಪ್ರವೀಣ ಕುಲಕರ್ಣಿ

ಕಾಸರಗೋಡು ಜಿಲ್ಲೆಯ ಕುಂಬಳೆ ಬಳಿಯ ಅನಂತಪುರದ 'ಬಬಿಯಾ' ತರಹದ ಸೆಲೆಬ್ರಿಟಿ ಮತ್ತೊಬ್ಬರು ಸಿಗಲಿಕ್ಕಿಲ್ಲ ಬಿಡಿ. ಏಳೂವರೆ ದಶಕಗಳವರೆಗೆ ಬದುಕಿದ್ದ ಆಕೆ, ಅನುದಿನವೂ ಸೆಲೆಬ್ರಿಟಿಯಾಗಿಯೇ ಮೆರೆದವಳು. ಅವಳನ್ನು ನೋಡುವ ಸಲುವಾಗಿಯೇ ಜನ ಅಲ್ಲಿನ ಸರೋವರ ದೇವಾಲಯಕ್ಕೆ ಹೋಗುತ್ತಿದ್ದರು. ಕಳೆದ ವಾರವಷ್ಟೇ ಆಕೆ ಕೊನೆಯುಸಿರು ಎಳೆದಾಗ, ಕಾಸರಗೋಡಿನ ಎಲ್ಲ ಪ್ರಮುಖ ರಾಜಕಾರಣಿಗಳು ಅವಳ ಅಂತಿಮ ದರ್ಶನವನ್ನು ಪಡೆಯಲು ಸಾಲುಗಟ್ಟಿ ನಿಂತಿದ್ದರು. ಅವಳ ಸಾವಿನ ಸುದ್ದಿಯನ್ನು ಪಾಕಿಸ್ತಾನದ 'ಡಾನ್' ಸೇರಿದಂತೆ ಜಗತ್ತಿನ ಹಲವು ಸುದ್ದಿ ಸಂಸ್ಥೆಗಳು ಆದ್ಯತೆಯ ಮೇರೆಗೆ ಪ್ರಕಟಿಸಿದವು. ಅಂದಹಾಗೆ, ಆ 'ಬಬಿಯಾ' ಯಾರೆಂದು ಪ್ರಶ್ನಿಸುತ್ತೀರಾ? ಅನಂತಪುರದ ಅನಂತಪದ್ಮನಾಭ ದೇವಾಲಯದ ಸರೋವರದಲ್ಲಿ ಬಿಡಾರ ಹೂಡಿದ್ದ ಹೆಣ್ಣು ಮೊಸಳೆ ಆಕೆ!

ಅನಂತಪದ್ಮನಾಭನ ದೇವಾಲಯ ಇರುವುದು ಸರೋವರದ ಮಧ್ಯಭಾಗದಲ್ಲಿ. ಭಾರತದ ಏಕೈಕ ಸರೋವರ ದೇವಾಲಯ ಎಂಬ ಹೆಗ್ಗಳಿಕೆಯನ್ನೂ ಇದು ಹೊಂದಿದೆ. ತಿರುವನಂತಪುರದ ಅನಂತಪದ್ಮನಾಭಸ್ವಾಮಿ ದೇವಾಲಯದ ಮೂಲಕ್ಷೇತ್ರ ಇದಾಗಿದೆ. ಅತ್ಯಂತ ನಯನ ಮನೋಹರವಾದ ದೇವಳ ಇದಾಗಿದ್ದು, ದೊಡ್ಡ ಸಂಖ್ಯೆಯ ಭಕ್ತರನ್ನು ಸೆಳೆಯುತ್ತದೆ. ಪ್ರತಿದಿನ ಪೂಜೆ ನೆರವೇರಿದ ಬಳಿಕ ಅರ್ಚಕರು ಸರೋವರದ ಬಳಿ ಬಂದು 'ಬಬಿಯಾ' ಎಂದು ಕೂಗುತ್ತಿದ್ದರು. ಸರೋವರದ ಗುಹೆಯಲ್ಲಿ ಇರುತ್ತಿದ್ದ 'ಬಬಿಯಾ' ಪ್ರಸಾದ ಸ್ವೀಕರಿಸಲು ಇದ್ದಕ್ಕಿದ್ದಂತೆ ಪ್ರತ್ಯಕ್ಷವಾಗುತ್ತಿತ್ತು. ಅರ್ಚಕರು ಅವಳನ್ನು ಮುಟ್ಟಿ, ನಮಸ್ಕರಿಸಿ, ಪ್ರಸಾದ ಸಮರ್ಪಣೆ ಮಾಡುತ್ತಿದ್ದರು. ಈ ವಿದ್ಯಮಾನವನ್ನು ಕಣ್ತುಂಬಿಕೊಳ್ಳಲು ಪ್ರಸಾದ ಅರ್ಪಣೆಯ ಸಮಯದಲ್ಲಿ ಭಕ್ತರ ದಂಡೇ ಸರೋವರದ ಸುತ್ತ ಜಮಾಯಿಸುತ್ತಿತ್ತು. ದೇವಾಲಯದ ಅರ್ಚಕರು ಕೊಟ್ಟ ಅನ್ನ–ಬೆಲ್ಲದಿಂದ ಮಾಡಿದ ಪಾಯಸದ ಪ್ರಸಾದವನ್ನು ತಿನ್ನುತ್ತಿದ್ದ 'ಬಬಿಯಾ'ಳಿಗೆ ಸಸ್ಯಾಹಾರಿ ಮೊಸಳೆ ಎಂದೇ ಕರೆಯಲಾಗುತ್ತಿತ್ತು. 'ಮನುಷ್ಯರಿಗಾಗಲಿ, ಪ್ರಾಣಿ–ಪಕ್ಷಿಗಳಿಗಾಗಲಿ 'ಬಬಿಯಾ' ಎಂದಿಗೂ ತೊಂದರೆ ಕೊಟ್ಟಿರಲಿಲ್ಲ' ಎಂದು ದೇವಾಲಯದ ಅರ್ಚಕರು ಹೇಳುತ್ತಾರೆ.

'ಬಬಿಯಾಳಿಗೆ ಈ ಹಿಂದೆ ಕೋಳಿಯನ್ನು ಹರಕೆಯಾಗಿ ಕೊಡುವ ಪದ್ಧತಿ ಇತ್ತಂತೆ.



ಬಬಿಯಾಳಿಗೆ ಅಂತಿಮ ವಿದಾಯ

ಆದರೆ, 2002ರಲ್ಲಿ ಅಷ್ಟಮಂಗಲ ಪ್ರಶ್ನೆಯಲ್ಲಿ ಕೋಳಿಯನ್ನು ಕೊಡುವುದು ಸರಿಯಲ್ಲ ಎಂಬ ಅಭಿಪ್ರಾಯ ವ್ಯಕ್ತವಾದ ಮೇಲೆ ಕೋಳಿ ಕೊಡುವುದನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತಂತೆ. ಸರೋವರದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತಿದ್ದ 'ಬಬಿಯಾ' ಕೆಲವು ವರ್ಷಗಳ ಹಿಂದೆ ದೇವಾಲಯದ ಪ್ರಾಂಗಣಕ್ಕೆ ಬಂದು ಅಚ್ಚರಿ ಮೂಡಿಸಿತ್ತು. ಭಕ್ತರು ಆಗ ತೆಗೆದ ಫೋಟೊ–ವಿಡಿಯೊಗಳು ವೈರಲ್ ಆಗಿದ್ದವು.

ಅನಂತಪುರದಲ್ಲಿ ಪದ್ಮನಾಭನಷ್ಟೇ 'ಬಬಿಯಾ' ಕೂಡ ಆಕರ್ಷಣೆಯ ಬಿಂದುವಾಗಿದ್ದಳು. ಭಕ್ತರು ಬಬಿಯಾಳ ಮುಂದೆಯೂ ತಮ್ಮ ಬೇಡಿಕೆಗಳನ್ನು ಇಡುತ್ತಿದ್ದರು. 'ಬಬಿಯಾ ಮುಂದೆ ಬೇಡಿಕೆ ಸಲ್ಲಿಸಿ, ಹರಕೆ ಹೊತ್ತು ಬಂದರೆ ನಮ್ಮ ಬೇಡಿಕೆ ಖಚಿತವಾಗಿ ಈಡೇರುತ್ತದೆ' ಎನ್ನುವ ನಂಬಿಕೆ ಭಕ್ತರಲ್ಲಿ ಬಲವಾಗಿ ಬೇರೂರಿತ್ತು. 'ಬಬಿಯಾ' ಲೀಲೆಗಳ ಕುರಿತು ಹಲವು ಕಥೆಗಳು ಸರೋವರದ ಸುತ್ತ ಸುರಳಿಯಂತೆ ಬಿಚ್ಚಿಕೊಳ್ಳುತ್ತವೆ. ಸರೋವರದ ಹತ್ತಿರದಲ್ಲಿಯೇ ಒಂದು ಕೆರೆ ಇದೆ. 'ಬಬಿಯಾ' ಒಮ್ಮೆ ಸರೋವರದಲ್ಲಿದ್ದರೆ, ಮತ್ತೊಮ್ಮೆ ಕೆರೆಯಲ್ಲಿ ಇರುತ್ತಿದ್ದಳು. ಎರಡೂ ಜಲಮೂಲಗಳನ್ನು ಸಂಪರ್ಕಿಸುವ ಕಾಲುವೆ ಇಲ್ಲದಿದ್ದರೂ ಅದು ಹೇಗೆ ಹೋಗಿ ಬರುತ್ತಿದ್ದಳೋ ಕಂಡವರಿಲ್ಲ ಎನ್ನುವುದು



ದೇವಾಲಯದ ಪ್ರಾಂಗಣಕ್ಕೆ ಬಬಿಯಾ ಬಂದಾಗ

ಅವಳನ್ನು ಮೇಲಿಂದ ಮೇಲೆ ನೋಡಲು ಹೋದವರ ಅಂಬೋಣ.

ಬಬಿಯಾ ಕುರಿತ ಇನ್ನೊಂದು ಕಥೆಯಂತೂ ಈಗ ಲೋಕಪ್ರಸಿದ್ಧ. ಅನಂತಪುರದಲ್ಲಿ ಮಿಲಿಟರಿ ಕ್ಯಾಂಪ್ ನಡೆದಾಗ ಸೇನೆಯ ಹಿರಿಯ ಅಧಿಕಾರಿಯೊಬ್ಬರು 'ಬಬಿಯಾ'ಳ ಕಥೆ ಕೇಳಿದ್ದರು. ಕೂಗಿದಾಗ ಅವಳು ಬರುವಳೆಂದು ಕೇಳಿ ಸರೋವರದ ಕಡೆ ಧಾವಿಸಿದ್ದರು. ಸರೋವರದ ಬಳಿಹೋಗಿ 'ಬಬಿಯಾ' ಎಂದು ಕೂಗೂ ಹಾಕಿದರು. ಸರೋವರದಲ್ಲಿ ಕಾಣಿಸಿಕೊಂಡ ಅವಳಿಗೆ ಗುಂಡಿಕ್ಕಿ ಕೊಂದು, ತಮ್ಮ ಜೀಪ್‌ನಲ್ಲಿ ಕೊಂಡೊಯ್ದರು. ಆದರೆ, ಅದೇ ದಿನ ಮಧ್ಯಾಹ್ನ ಅರ್ಚಕರು ಎಂದಿನಂತೆ ಪೂಜೆ ಮುಗಿಸಿ, ಸರೋವರದ ಬಳಿ ಬಂದು 'ಬಬಿಯಾ' ಎಂದು ಕೂಗಿದಾಗ ಬಂದು ಪ್ರಸಾದ ಸ್ವೀಕರಿಸಿದಳು ಎಂಬ ಪ್ರತೀತಿ ಈ ಭಾಗದಲ್ಲಿದೆ. ಮೊನ್ನೆ 'ಬಬಿಯಾ' ತೀರಿ ಹೋದಾಗ, ಮತ್ತೆ ಅವಳು ಸರೋವರದಲ್ಲಿ ಅವತರಿಸುತ್ತಾಳೆ ಎಂದು ಹಲವರು ಹೇಳುತ್ತಿದ್ದರು.

'ಬಬಿಯಾ' ತೀರಿದ ದಿನ 'ದೇವರ ಸ್ವಂತ ಮೊಸಳೆ, ವಿಷ್ಣುಪಾದವನ್ನು ಸೇರಿತು' ಎಂದು ಹಲವರು ಟ್ವೀಟ್‌ನಲ್ಲಿ ಕಂಬನಿ ಮಿಡಿದರು. ಧಾರ್ಮಿಕ ವಿಧಿವಿಧಾನಗಳೊಂದಿಗೆ 'ಬಬಿಯಾ'ಳ ಅಂತ್ಯಕ್ರಿಯೆಯನ್ನೂ ನಡೆಸಲಾಯಿತು. ಅವಳ ನೆನಪಿಗೊಂದು ಸ್ಮಾರಕ ನಿರ್ಮಿಸಬೇಕು ಎಂಬ ಬೇಡಿಕೆ ಕೂಡ ಬೆನ್ನಹಿಂದೆಯೇ ಬಂತು. ಮೊಸಳೆಗಳ ಆಕ್ರಮಣಕಾರಿ ಸ್ವಭಾವದ ಕುರಿತು ಎಲ್ಲರಿಗೂ ಗೊತ್ತಿರುವಂಥದ್ದೇ. ಅದರಲ್ಲೂ 'ಮೊಸಳೆ ಕಣ್ಣೀರಿ'ನ ಕಥೆ ಯಾರಿಗೆ ತಾನೆ ಗೊತ್ತಿಲ್ಲ? ಆದರೆ, ಶಾಂತಸ್ವಭಾವದ 'ಬಬಿಯಾ' ಎಲ್ಲರ ಕಣ್ಮಣಿಯಾಗಿದ್ದಳು. ಇಂತಹ ಸೆಲೆಬ್ರಿಟಿ ಇನ್ನು ನೆನಪು ಮಾತ್ರ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65